ವಿಜಯವಾಣಿ
ಬುಧವಾರ 24 ಜುಲೈ 2024

## ಕೃಷಿ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

» ಆ.10ರೊಳಗೆ ಸಲ್ಲಿಸಲು ಅವಕಾಶ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಮಂಡ್ಯದ ವಿ.ಸಿ. ಫಾರ್ಮ್‌ನಲ್ಲಿ 2024-25ನೇ ಸಾಲಿನ 2 ವರ್ಷಗಳ ಕೃಷಿ ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾಷೆಯಾಗಿ ಅಭ್ಯಸಿಸಿರಬೇಕು. ಕಳೆದ ಜೂ. 30ಕ್ಕೆ 19 ವರ್ಷ ಮೀರಿರದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ರೈತರ ಹಾಗು ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50 ಸೀಟುಗಳನ್ನು ಮೀಸಲಿಡಲಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು ಕುಲಸಚಿವರು, ಕೃಷಿ ವಿವಿ, ಜಿಕೆವಿಕೆ, ಬೆಂಗಳೂರು- 65 ಇಲ್ಲಿಗೆ ಆ.10ರೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080- 23330149 ಸಂಪರ್ಕಿಸಬಹುದು.

ಜನಮನದ ಸಾರಥಿ ವಾರ್ತಾ ಭಾರತಿ
Jul 24, 2024

## ಜು.27ಕ್ಕೆ 'ಕೃಷಿ ಸಂತೆ'

ಬೆಂಗಳೂರು, ಜು.23: ಕೃಷಿ ವಿವಿ ಕಾರ್ಯ ಚಟುವಟಿಕೆಗಳು ಮತ್ತು ಉತ್ಪನ್ನಗಳ ಕುರಿತು ಸಾರ್ವಜನಿಕರು, ರೈತರಲ್ಲಿ ಅರಿವು ಮೂಡಿಸಲು 'ಕೃಷಿ ಸಂತೆ'ಯನ್ನು ಜು.27ರಂದು ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಬೆಳಗ್ಗೆ 6:30ರಿಂದ ಸಂಜೆ 4ಗಂಟೆಯ ವರೆಗೆ ಹಮ್ಮಿಕೊಳ್ಳಲಾಗಿದೆ.

ಸಂತೆಯಲ್ಲಿ ವಿವಿ ಹೊರತಂದಿರುವ ಉತ್ಪನ್ನಗಳು/ತಳಿಗಳ ಬಿತ್ತನೆ ಬೀಜಗಳು, ತೋಟಗಾರಿಕೆ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಕೀಟನಾಶಕ, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಕೈಯಿಂದ ತಯಾರಿಸಿದ ಪರಿಮಳಯುಕ್ತ ಸಾಬೂನು ಮುಂತಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯಿರುತ್ತದೆ ಎಂದು ಪ್ರಕಟನೆ ತಿಳಿಸಿದೆ.

ಸಂಯುಕ್ತ ಕರ್ನಾಟಕ
ಬುಧವಾರ 24 ಜುಲೈ 2024

## 27ರಂದು ಗಾಳಿಪಟ ಉತ್ಸವ

ಬೆಂಗಳೂರು: ಕೃಷಿ ವಿಜ್ಞಾನ ಕೇಂದ್ರ, ಕರ್ನಾಟಕ ಜಾನಪದ ಪರಿಷತ್ತು ಸಂಯುಕ್ತಾಶ್ರಯದಲ್ಲಿ ಜು.27ರಂದು ರಾಜ್ಯಮಟ್ಟದ ಗಾಳಿಪಟ ಉತ್ಸವ–ಸ್ಪರ್ಧೆಯನ್ನು ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10 ಗಂಟೆಗೆ ನಡೆಯಲಿರುವ ಈ ಸ್ಪರ್ಧೆಯನ್ನು ಮೂರು ಹಂತಗಳಲ್ಲಿ ನಡೆಸಲಾಗುತ್ತಿದೆ. ಅಂದರೆ 14, 15 ಹಾಗೂ 22 ವರ್ಷದೊಳಗಿನವರಿಗಾಗಿ ಸ್ಪರ್ಧೆ ನಡೆಸಲಾಗುತ್ತಿದ್ದು ಪುರುಷರ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಆಯೋಜಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ.080–23605033, 7795632294 ಸಂಪರ್ಕಿಸಬಹುದು.

ವಿಜಯವಾಣಿ
Bengaluru Edition Edition
Jul 24, 2024 Page No. 15
Powered by: erelego.com

# ಕೃಷಿ ವಲಯಕ್ಕೆ ಸಂಶೋಧನೆ ತಂತ್ರಜ್ಞಾನ ಬಲ

## ಅನ್ನದಾತರ ಏಳಿಗೆಗೆ ನೆರವಿನ ಅಭಯ | ರೈತರನ್ನು ನೈಸರ್ಗಿಕ ಕೃಷಿಯಲ್ಲಿ ತೊಡಗಿಸಲು ಸಂಕಲ್ಪ

**ದೇ**ಶದ ಆಹಾರ ಬಟ್ಟಲನ್ನು ಸದೃಢ ಹಾಗೂ ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ರೈತರಿಗೆ ತಂತ್ರಜ್ಞಾನ ಆಧಾರಿತ ಸೌಲಭ್ಯ ಒದಗಿಸುವ ಮೂಲಕ ಕೃಷಿ ಕ್ಷೇತ್ರವನ್ನು ಸಶಕ್ತಗೊಳಿಸಲು ಡಿಜಿಟಲ್ ಸ್ಪರ್ಶ ನೀಡುವ ಸಂಕಲ್ಪವನ್ನು ಪ್ರಸಕ್ತ ಆಯವ್ಯಯದಲ್ಲಿ ಕೈಗೊಳ್ಳಲಾಗಿದೆ. ವ್ಯವಸಾಯ ಕ್ಷೇತ್ರವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಯ ಹಳಿಯ ಮೇಲೆ ತರಲು ರೈತಸ್ನೇಹಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒತ್ತು ನೀಡಲಾಗಿದೆ.

ಮುಂದಿನ ಎರಡು ವರ್ಷದಲ್ಲಿ ದೇಶಾದ್ಯಂತ 1 ಕೋಟಿ ರೈತರನ್ನು ನೈಸರ್ಗಿಕ ಕೃಷಿಯಲ್ಲಿ ತೊಡಗಿಸುವುದು, ದ್ವಿದಳ ಧಾನ್ಯ-ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಅಭಿಯಾನ, ಕೃಷಿಗಾಗಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಒದಗಿಸುವುದು, ಹೆಚ್ಚು ಇಳುವರಿ ಮತ್ತು ಬರ ನಿರೋಧಕವುಳ್ಳ 100ಕ್ಕೂ ಹೆಚ್ಚು ಬೆಳೆ ತಳಿಗಳನ್ನು ರೈತರಿಗೆ ತಲುಪಿಸುವ ವಾಗ್ದಾನ ನೀಡಲಾಗಿದೆ. ಜತೆಗೆ ಕೃಷಿಕರಿಗೆ ಸುಲಭವಾಗಿ ಸಾಲಸೌಲಭ್ಯ ಹಾಗೂ ಸಹಕಾರ ತತ್ವದಡಿ ಗ್ರಾಮೀಣರ ಏಳಿಗೆಗೆ ಪೂರಕವಾಗುವಂತಹ ರಾಷ್ಟ್ರೀಯ ಸಹಕಾರ ನೀತಿ ಜಾರಿಗೆ ತರಲಾಗುತ್ತದೆ. ಈ ಎಲ್ಲ ಕೃಷಿ ಹಾಗೂ ಕೃಷಿ ಸಂಬಂಧಿತ ಕಾರ್ಯಕ್ರಮಗಳನ್ನು ಕಾಲಮಿತಿಯೊಳಗೆ ಜಾರಿಗೆ ತರಲು 1,51,851 ಕೋಟಿ ರೂ. ಮೊತ್ತದ ಅನುದಾನವನ್ನು ನಿಗದಿ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

» ಕೃಷಿ ಹಾಗೂ ಸಂಬಂಧಿತ ಕ್ಷೇತ್ರಕ್ಕೆ 1.51 ಲಕ್ಷ ಕೋಟಿ ರೂ. ಅನುದಾನ ನಿಗದಿ

ಮುಖ್ಯವಾಗಿ ಕೃಷಿಯಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಮೇಲಿನ ಅವಲಂಬನೆ ಕಡಿಮೆಗೊಳಿಸಿ ಮಣ್ಣಿನ ಆರೋಗ್ಯ ವೃದ್ಧಿ, ಜೀವವೈವಿಧ್ಯತೆ ಹೆಚ್ಚಳ ಹಾಗೂ ಕೃಷಿ ವೆಚ್ಚ ತಗ್ಗಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತದೆ. ಸರ್ಕಾರದ ಈ ಪ್ರಯತ್ನದಿಂದಾಗಿ ಗ್ರಾಮೀಣ ಭಾಗದ ಆರ್ಥಿಕತೆಯನ್ನು ವೃದ್ಧಿಸುವ ಮಹತ್ವಾಕಾಂಕ್ಷೆಯನ್ನು ಸರ್ಕಾರ ಹೊಂದಿರುವುದಾಗಿ ಹಣಕಾಸು ಸಚಿವೆ ಬಜೆಟ್ ವೇಳೆ ಪ್ರತಿಪಾದಿಸಿದ್ದಾರೆ.

**ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ:** ಪ್ರಾಯೋಗಿಕ ಯೋಜನೆಯ ಯಶಸ್ಸಿನಿಂದ ಉತ್ತೇಜಿತವಾಗಿರುವ ನಮ್ಮ ಸರ್ಕಾರವು, ರಾಜ್ಯಗಳ ಸಹಭಾಗಿತ್ವದಲ್ಲಿ ರೈತರು ಹಾಗೂ ಅವರ ಜಮೀನುಗಳ ವ್ಯಾಪ್ತಿಗಾಗಿ ಕೃಷಿಯಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (ಡಿಪಿಐ) ಅನುಷ್ಠಾನವನ್ನು 3 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದೆ. ಈ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಿದ್ದು, ಈ ವರ್ಷ ದೇಶದ 400 ಜಿಲ್ಲೆಗಳಲ್ಲಿ ಡಿಪಿಐ ಬಳಸಿ, ಖಾರಿಫ್ ಹಂಗಾಮಿನಲ್ಲಿ ಡಿಜಿಟಲ್ ಬೆಳೆ ಸಮೀಕ್ಷೆ ಕೈಗೊಳ್ಳಲಾಗುವುದು. ಇಂತಹ ವಿನೂತನ ಕಾರ್ಯಕ್ರಮದ ಮೂಲಕ 6 ಕೋಟಿ ರೈತರು ಹಾಗೂ ಅವರ ಜಮೀನುಗಳ ಮಾಹಿತಿಯನ್ನು ರೈತ ಮತ್ತು ಭೂ ದಾಖಲೆಗಳಲ್ಲಿ ಅಳವಡಿಸಲಾಗುತ್ತದೆ. ಇದರಿಂದ ರೈತರಿಗೆ ತಮ್ಮ ಜಮೀನಿನ ಪಹಣಿ ಸಹಿತ ಇನ್ನಿತರ ದಾಖಲಾತಿಗಳನ್ನು ಸಂರಕ್ಷಿಸಿಡಲು ಅನುಕೂಲವಾಗಲಿದೆ. ಜತೆಗೆ ಐದು ರಾಜ್ಯಗಳಲ್ಲಿ 'ಜನ್ ಸಮರ್ಥ್' ಆಧಾರಿತ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ವಿತರಣೆಯನ್ನು ಸಕ್ರಿಯಗೊಳಿಸಲಾಗುತ್ತದೆ ಎಂದು ನಿರ್ಮಲಾ ವಿವರಿಸಿದ್ದಾರೆ.






### ಕೃಷಿ ಸಂಶೋಧನೆ ವರ್ಗಾವಣೆಗೆ ಆದ್ಯತೆ

**ದೇ**ಶದ ಕೃಷಿ ಕ್ಷೇತ್ರದಲ್ಲಿ ನಿರಂತರವಾಗಿ ಆವಿಷ್ಕಾರ, ಸಂಶೋಧನೆಗಳು ನಡೆಯುತ್ತಿವೆ. ಇದರ ಲಾಭವನ್ನು ರೈತರಿಗೆ ಇನ್ನಷ್ಟು ಸುಲಭವಾಗಿ ತಲುಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೃಷಿಯಲ್ಲಿ ಉತ್ಪಾದಕತೆ ಹೆಚ್ಚಿಸುವ ಹಾಗೂ ಹವಾಮಾನ ವೈಪರೀತ್ಯ, ಬರ ನಿರೋಧಕತೆಯನ್ನು ತಾಳಿಕೊಳ್ಳುವ ಸಾಮರ್ಥ್ಯವುಳ್ಳ ಬೆಳೆ ಪ್ರಭೇದಗಳನ್ನು ಅಭಿವೃದ್ಧಿಪಡಿಸಲು ಕೃಷಿ ಸಂಶೋಧನಾ ವ್ಯವಸ್ಥೆಯನ್ನು ಸಮಗ್ರ ರೂಪದಲ್ಲಿ ಪರಾಮರ್ಶೆಗೆ ಒಳಪಡಿಸಲು ಸರ್ಕಾರ ಇಚ್ಛಿಸಿದೆ. ಖಾಸಗಿ ವಲಯದ ಸಹಯೋಗ ಹಾಗೂ ಹಂತ ಹಂತವಾಗಿ ಹಣ ಒದಗಿಸಲಾಗುತ್ತದೆ. ಇಂತಹ ಸಂಶೋಧನೆಯ ಮೇಲ್ವಿಚಾರಣೆಗಾಗಿ ಸರ್ಕಾರದೊಳಗಿರುವ ಮತ್ತು ಹೊರಗಿರುವ ವಿಷಯ ಪರಿಣಿತರನ್ನು ಬಳಸಿಕೊಳ್ಳಲಾಗುತ್ತದೆ ಎಂದು ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ.

### ದ್ವಿದಳಧಾನ್ಯ, ಎಣ್ಣೆಕಾಳು ಸ್ವಾವಲಂಬನೆಗೆ ಅಭಿಯಾನ

**ದೇ**ಶದೆಲ್ಲೆಡೆ ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು ಬಳಕೆಯಲ್ಲಿ ಬೇಡಿಕೆ ಹೆಚ್ಚುತ್ತಿದೆ. ಇದಕ್ಕೆ ಪೂರಕವಾಗಿ ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಗಳು ಸಾಗಿವೆ. ಈ ಎರಡೂ ಧಾನ್ಯಗಳಲ್ಲಿ ದೇಶವು ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಅಭಿಯಾನ ಕೈಗೊಳ್ಳಲಾಗುತ್ತದೆ. ಮುಖ್ಯವಾಗಿ ಈ ಬೆಳೆಗಳ ಉತ್ಪಾದನೆ, ದಾಸ್ತಾನು ಮತ್ತು ಮಾರುಕಟ್ಟೆ ಜಾಲವನ್ನು ಸದೃಢಗೊಳಿಸಲಾಗುತ್ತದೆ. ಕಳೆದ ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಿದಂತೆ ಸಾಸಿವೆ, ಶೇಂಗಾ, ಎಳ್ಳು, ಸೋಯಾಬೀನ್ ಮತ್ತು ಸೂರ್ಯಕಾಂತಿ ಅಂತಹ ಎಣ್ಣೆ ಕಾಳು ವಿಭಾಗದಲ್ಲಿ ಆತ್ಮನಿರ್ಭರತೆ ಸಾಧಿಸುವ ಮಹತ್ವದ ಗುರಿಯನ್ನು ಹೊಂದಲು ಕಾರ್ಯತಂತ್ರ ರೂಪಿಸಲಾಗುತ್ತಿದೆ.

### ಮುಖ್ಯಾಂಶ

- 10,000 ಅಗತ್ಯ ಆಧಾರಿತ ಜೈವಿಕ ಇನ್‌ಪುಟ್ ಕೇಂದ್ರಗಳ ಸ್ಥಾಪನೆ
- ದೇಶದ 400 ಜಿಲ್ಲೆಗಳಲ್ಲಿ ಡಿಜಿಟಲ್ ಬೆಳೆ ಸರ್ವೇ ನಡೆಸಲು ಯೋಜನೆ
- ಅಧಿಕ ಇಳುವರಿ, ಬರ ನಿರೋಧಕವುಳ್ಳ 109 ತಳಿಗಳ ಬಿಡುಗಡೆ
- ಐದು ರಾಜ್ಯಗಳಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ವಿತರಣೆಗೆ ಸಿದ್ಧತೆ
- ತರಕಾರಿ ಬೆಳೆಗಳ ಉತ್ಪಾದನೆ, ದಾಸ್ತಾನು, ಮಾರುಕಟ್ಟೆ ಜಾಲ ವಿಸ್ತರಣೆಗಾಗಿ ರೈತರಿಗೆ ನೆರವು
- ವ್ಯವಸಾಯ ವಲಯಕ್ಕೆ ಒಟ್ಟು 1.52 ಲಕ್ಷ ಕೋಟಿ ರೂ. ಅನುದಾನ ಮೀಸಲು.

### ಸೀಗಡಿ ಉತ್ಪಾದನೆ ಮತ್ತು ರಫ್ತು



ಸೀಗಡಿ ಸಂಸಾರಕ್ಕಾಗಿ ನ್ಯೂಕ್ಲಿಯಸ್ ಸಂತಾನೋತ್ಪತ್ತಿ ಕೇಂದ್ರಗಳ ಜಾಲವನ್ನು ಸ್ಥಾಪಿಸಲು ಹಣಕಾಸಿನ ಬೆಂಬಲವನ್ನು ಒದಗಿಸಲಾಗು ವುದು. ನಬಾರ್ಡ್ ಮೂಲಕ ಸೀಗಡಿ ಸಾಕಾಣಿಕೆ, ಸಂಸ್ಕರಣೆ ಮತ್ತು ರಫ್ತಿಗೆ ಹಣಕಾಸು ಒದಗಿಸಲಾಗುವುದು.

### ನೈಸರ್ಗಿಕ ಬೇಸಾಯಕ್ಕೆ ಜೈ

**ಪಾ**ರಂಪರಿಕ ಕೃಷಿ ಪದ್ಧತಿಯಾದ ಸಾವಯವ ಕೃಷಿ ಜತೆಗೆ ನೈಸರ್ಗಿಕ ಕೃಷಿ ಉತ್ತೇಜಿಸಲು ಮುಂದಿನ ಎರಡು ವರ್ಷಗಳಲ್ಲಿ ದೇಶಾದ್ಯಂತ 1 ಕೋಟಿ ರೈತರನ್ನು ಸಜ್ಜುಗೊಳಿಸಲಾಗುತ್ತದೆ. ಪ್ರಮಾಣೀಕರಣ ಮತ್ತು ಬ್ರ್ಯಾಂಡಿಂಗ್ ಬೆಂಬಲದೊಂದಿಗೆ ಈ ಪದ್ಧತಿಯನ್ನು ವ್ಯಾಪಕಗೊಳಿಸಲಾಗುತ್ತದೆ. ಇದಕ್ಕಾಗಿ ವೈಜ್ಞಾನಿಕ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿಗಳ ಸಹಕಾರ ಪಡೆಯಲಾಗುತ್ತದೆ. ಇದಲ್ಲದೆ 10,000 ಬಯೋ ಇನ್‌ಪುಟ್ ರಿಸೋರ್ಸ್ ಸೆಂಟರ್‌ಗಳನ್ನು ಸ್ಥಾಪಿಸಲಾಗುತ್ತದೆ ಎಂದು ಕೇಂದ್ರ ಸಚಿವೆ ತಿಳಿಸಿದ್ದಾರೆ.



### ತರಕಾರಿ ಉತ್ಪಾದನೆ, ಪೂರೈಕೆ ಸರಪಳಿ



**ಕೃ**ಷಿ ಉತ್ಪಾದನೆಯಲ್ಲಿ ತೋಟಗಾರಿಕೆ ಬೆಳೆಗಳು ಹೆಚ್ಚು ಮಹತ್ವ ಪಡೆದುಕೊಂಡಿವೆ. ತರಕಾರಿ ಉತ್ಪಾದನೆಗೆ ದೊಡ್ಡ ಪ್ರಮಾಣದ ಕ್ಲಸ್ಟರ್‌ಗಳನ್ನು ಬಳಕೆ ಕೇಂದ್ರಗಳಿಗೆ ಸನಿಹದಲ್ಲಿ ಸ್ಥಾಪಿಸಿ ಅಭಿವೃದ್ಧಿಪಡಿಸಲಾಗುವುದು. ಸಂಗ್ರಹಣೆ, ದಾಸ್ತಾನು ಹಾಗೂ ಮಾರುಕಟ್ಟೆ ಜಾಲ ಸೇರಿ ತರಕಾರಿ ಪೂರೈಕೆ ಸರಪಳಿಯನ್ನು ಸದೃಢಗೊಳಿಸಲು ರೈತ ಉತ್ಪಾದಕರ ಸಂಸ್ಥೆ (ಎಫ್‌ಪಿಒ), ಸಹಕಾರಿಗಳು ಮತ್ತು ನವೋದ್ಯಮಿಗಳನ್ನು ಉತ್ತೇಜಿಸಲು ಹೆಚ್ಚು ಒತ್ತು ನೀಡಲಾಗುತ್ತದೆ.



### ಹೊಸ ತಳಿ ಬಿಡುಗಡೆ

**ಕೃ**ಷಿಯಲ್ಲಿ ಇಳುವರಿ ಹೆಚ್ಚಿಸುವ ನಿಟ್ಟಿನಲ್ಲಿ ಹೊಸ ಹೊಸ ತಳಿಗಳನ್ನು ಬಿಡುಗಡೆಗೊಳಿಸುವ ಕೆಲಸ ಆಗುತ್ತಿದೆ. ಈ ನಿಟ್ಟಿನಲ್ಲಿ ಅಧಿಕ ಇಳುವರಿ ನೀಡುವ ಹಾಗೂ ಹವಾಮಾನ ವೈಪರೀತ್ಯವನ್ನು ತಾಳಿಕೊಳ್ಳುವ ಸಾಮರ್ಥ್ಯವುಳ್ಳ 109 ತೋಟಗಾರಿಕೆ ಬೆಳೆಗಳ ಪ್ರಭೇದಗಳನ್ನು ರೈತರಿಗೆ ಒದಗಿಸಲಾಗುತ್ತದೆ.

### ಭೂ ಪಾರ್ಸೆಲ್ ಗುರುತಿನ ಸಂಖ್ಯೆ

**ಗ್ರಾ**ಮೀಣ ಭಾಗಗಳಲ್ಲಿ ಎಲ್ಲ ಜಮೀನುಗಳಿಗೆ ಯೋಜನೆಯಡಿ ವಿಶಿಷ್ಟವಾದ 'ಭೂ ಪಾರ್ಸೆಲ್ ಗುರುತಿನ ಸಂಖ್ಯೆ' ನೀಡಲಾಗುತ್ತದೆ. ಜಮೀನು ಸಮೀಕ್ಷೆ ಮಾಡುವ ಮೂಲಕ ಎಲ್ಲ ದಾಖಲೆಗಳನ್ನು ಡಿಜೀಟಲೀಕರಣ, ಭೂ ನೋಂದಾವಣೆ ಸ್ಥಾಪಿಸುವುದು ಸೇರಿ ರೈತರ ನೋಂದಣಿಗೆ ಲಿಂಕ್ ಮಾಡಲಾಗುತ್ತದೆ. ಈ ಕ್ರಮದಿಂದ ಸುಲಭವಾಗಿ ಸಾಲ ಸೌಲಭ್ಯ ಸೇರಿ ಇತರ ಕೃಷಿ ಸೇವೆಗಳು ಸುಗಮವಾಗಿ ನಡೆಸಲು ಅನುಕೂಲವಾಗುತ್ತದೆ. ನಗರ ಪ್ರದೇಶಗಳಲ್ಲಿನ ಭೂ ದಾಖಲೆಗಳನ್ನು ಜಿಐಎಸ್ ಮ್ಯಾಪಿಂಗ್ ನೊಂದಿಗೆ ಡಿಜಿಟಲೀಕರಣಗೊಳಿಸಲಾಗುತ್ತದೆ. ಇದರಲ್ಲಿ ಆಸ್ತಿ ದಾಖಲೆ ನಿರ್ವಹಣೆ, ನವೀಕರಣ, ತೆರಿಗೆ ಆಡಳಿತಕ್ಕಾಗಿ ಐಟಿ ಆಧಾರಿತ ವ್ಯವಸ್ಥೆ ಸ್ಥಾಪಿಸಲಾಗುತ್ತದೆ. ಇದರಿಂದಾಗಿ, ಇವುಗಳ ಆರ್ಥಿಕ ಸ್ಥಿತಿ ಸುಧಾರಣೆಗೆ ಅನುಕೂಲವಾಗಲಿದೆ.

24-07-2024
Kannadaprabha Pg 08

# ಜಮೀನುಗಳಿಗೆ ಭೂ ಆಧಾರ್

## ಭೂ ಅಕ್ರಮ ಕಡಿವಾಣಕ್ಕೆ ಕ್ರಮ | ಪ್ರತಿ ಭೂಮಿ ಪಾರ್ಸಲ್‌ಗೂ ಒಂದೊಂದು ಸಂಖ್ಯೆ

ಕೇಂದ್ರ ಸರ್ಕಾರವು ಮಂಗಳವಾರ ಬಜೆಟ್‌ನಲ್ಲಿ ಹಲವಾರು ಭೂಸುಧಾರಣಾ ಘೋಷಣೆ ಮಾಡಿದ್ದು, ಆ ಪೈಕಿ ಗ್ರಾಮೀಣ ಪ್ರದೇಶಗಳಲ್ಲಿ ಭೂಮಿಗೆ ವಿಶಿಷ್ಟ ಗುರುತಿನ ಸಂಖ್ಯೆ ಅಥವಾ 'ಭೂ-ಆಧಾರ್' ನೀಡುವುದು ಪ್ರಮುಖವಾಗಿದೆ. ಇದಲ್ಲದೆ, ಎಲ್ಲಾ ನಗರ ಭೂ ದಾಖಲೆಗಳ ಡಿಜಿಟಲೀಕರಣವನ್ನು ಪ್ರಸ್ತಾಪಿಸಿದೆ. ಈ ಮೂಲಕ ಭೂ ಅಕ್ರಮಗಳಿಗೆ ಕಡಿವಾಣ ಹಾಕಲು ಮುಂದಾಗಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಈ ಭೂ ಸುಧಾರಣೆಗಳನ್ನು ಕೈಗೊಳ್ಳಲು ಕೇಂದ್ರವು ರಾಜ್ಯಗಳೊಂದಿಗೆ ಕೆಲಸ ಮಾಡುತ್ತದೆ. ಮುಂದಿನ 3 ವರ್ಷಗಳಲ್ಲಿ ಈ ಸುಧಾರಣೆಗಳನ್ನು ಪೂರ್ಣಗೊಳಿಸಲು ರಾಜ್ಯಗಳನ್ನು ಕೇಂದ್ರ ಉತ್ತೇಜಿಸಲಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಭೂ-ಸಂಬಂಧಿತ ಸುಧಾರಣೆಗಳು ಮತ್ತು ಕ್ರಮಗಳನ್ನು 2 ರೀತಿಯಲ್ಲಿ ಕೈಗೊಳ್ಳಲಾಗುತ್ತಿದೆ. (1) ಭೂ ಆಡಳಿತ, ಯೋಜನೆ ಮತ್ತು ನಿರ್ವಹಣೆ ಮತ್ತು (2) ನಗರ ಯೋಜನೆ, ಬಳಕೆ ಮತ್ತು ಕಟ್ಟಡ ಬೈಲಾಗಳನ್ನು ಈ ಸುಧಾರಣಾ ಕ್ರಮಗಳು ಒಳಗೊಳ್ಳುತ್ತವೆ. ಸೂಕ್ತ ಹಣಕಾಸಿನ ಬೆಂಬಲದ ಮೂಲಕ ಇವುಗಳನ್ನು ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳಿಸಲು ಪ್ರೋತ್ಸಾಹಿಸಲಾಗುತ್ತದೆ.



**ಭೂ ಆಧಾರ್:** ಗ್ರಾಮೀಣ ಭೂಮಿ-ಸಂಬಂಧಿತ ಕ್ರಮಗಳು, ಎಲ್ಲ ಜಮೀನಿಗೆ ಭೂ ಪಾರ್ಸೆಲ್ ಗುರುತಿನ ಸಂಖ್ಯೆ (ಯುಎಲ್‌ಪಿಐಎನ್) ಅಥವಾ ಭೂ-ಆಧಾರ್ ಅನ್ನು ಒಳಗೊಂಡಿರುತ್ತವೆ. ಕ್ಯಾಡಾಸ್ಟಲ್ ನಕ್ಷೆಗಳ ಡಿಜಿಟೈಸೇಶನ್; ಪ್ರಸ್ತುತ ಮಾಲೀಕತ್ವದ ಪ್ರಕಾರ ನಕ್ಷೆ ಉಪ-ವಿಭಾಗಗಳ ಸಮೀಕ್ಷೆ; ಭೂ ನೋಂದಣಿ ರಚನೆ ಮತ್ತು ರೈತರ ನೋಂದಣಿಗೆ ಲಿಂಕ್ ಮಾಡುವುದು ಕೂಡ ಪ್ರಮುಖ ಕ್ರಮಗಳಾಗಿವೆ. ಈ ಕ್ರಮಗಳಿಂದ ಸಾಲ ನೀಡಿಕೆ ಸುಲಭವಾಗಲಿದೆ ಮತ್ತು ಇತರ ಕೃಷಿ ಸೇವೆಗಳನ್ನು ಸಹ ಸುಗಮಗೊಳಿಸುತ್ತದೆ.

**ನಗರ ಭೂದಾಖಲೆ ಡಿಜಿಟಲೀಕರಣ:** ಇನ್ನು ನಗರ ಪ್ರದೇಶಗಳಲ್ಲಿನ ಭೂ ದಾಖಲೆಗಳನ್ನು ಜಿಐಎಸ್ ಮ್ಯಾಪಿಂಗ್‌ನೊಂದಿಗೆ ಡಿಜಿಟಲೀಕರಣ ಗೊಳಿಸಲಾಗುವುದು. ಆಸ್ತಿ ದಾಖಲೆ ನಿರ್ವಹಣೆ, ನವೀಕರಣ ಮತ್ತು ತೆರಿಗೆ ಆಡಳಿತಕ್ಕಾಗಿ ಐಟಿ ಆಧಾರಿತ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು. ಇವುಗಳು ನಗರ ಸ್ಥಳೀಯ ಸಂಸ್ಥೆಗಳಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹ ಅನುಕೂಲವಾಗುತ್ತವೆ.

# ಕೃಷಿಗೂ ಡಿಜಿಟಲ್, ಟೆಕ್ ಟಚ್

## ಕೃಷಿ ವಲಯಕ್ಕೆ 1.52 ಲಕ್ಷ ಕೋಟಿ ಅನುದಾನ | ಸಂಶೋಧನೆ, ತಂತ್ರಜ್ಞಾನ, ಖಾಸಗಿ ಸಹಭಾಗಿತ್ವ

**ಈ ವರ್ಷ ಆದ್ಯತಾ ವಲಯ ಎಂದು ಗುರುತಿಸಲಾದ 9 ವಲಯಗಳಲ್ಲಿ ಕೃಷಿ ವಲಯ ಕೂಡಾ ಸೇರಿದೆ. ಈ ವಲಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ, ಸಂಶೋಧನೆ, ತಂತ್ರಜ್ಞಾನ ಬಳಕೆ, ಖಾಸಗಿ ವಲಯದ ಸೇರ್ಪಡೆ ಮತ್ತು ಸರ್ಕಾರದ ನೆರವಿನ ಮೂಲಕ ಕೃಷಿ ವಲಯಕ್ಕೆ ಹೊಸ ದಿಕ್ಕು ನೀಡಲು ಸರ್ಕಾರ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಬಜೆಟ್‌ನಲ್ಲಿ ಕೃಷಿ ಮತ್ತು ಅದಕ್ಕೆ ಸಂಬಂಧಿತ ವಲಯಕ್ಕೆ ಭರ್ಜರಿ 1.52 ಲಕ್ಷ ಕೋಟಿ ರು. ಅನುದಾನ ನೀಡಲು ಸರ್ಕಾರ ನಿರ್ಧರಿಸಿದೆ.**

### ತಳಿ ಸಂಶೋಧನೇಲಿ ಭಾರಿ ಬದಲಾವಣೆ

ಕೃಷಿ ಉತ್ಪಾದಕತೆ ಹೆಚ್ಚಳ ಮತ್ತು ಪರಿಸರಕ್ಕೆ ಹೊಂದಿಕೊಳ್ಳುವ ತಳಿಗಳ ಅಭಿವೃದ್ಧಿ ನಿಟ್ಟಿನಲ್ಲಿ, ಹಾಲಿ ಜಾರಿಯಲ್ಲಿರುವ ಕೃಷಿ ಸಂಶೋಧನಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಇಂಥ ಸಂಶೋಧನೆಗೆ ಅಗತ್ಯವಾದ ಹಣಕಾಸಿನ ನೆರವನ್ನು ಸರ್ಕಾರ ನೀಡಲಿದೆ. ಇದಕ್ಕೆ ಚಾಲೆಂಜ್ ಮಾದರಿಯನ್ನು ಬಳಸಿಕೊಳ್ಳಲಾಗುವುದು. ಈ ಯೋಜನೆಯಲ್ಲಿ ಖಾಸಗಿ ವಲಯವನ್ನೂ ಬಳಸಿಕೊಳ್ಳಲಾಗುವುದು. ಇಂಥ ಸಂಶೋಧನೆಗಳ ಮೇಲೆ ಸರ್ಕಾರ ಮತ್ತು ಖಾಸಗಿ ವಲಯದ ವಿಷಯ ತಜ್ಞರು ಕಣ್ಗಾವಲು ಇಡಲಿದ್ದಾರೆ.

### ದವಸ, ಎಣ್ಣೆಕಾಳುಗಳ ಸ್ವಾವಲಂಬನೆ ಮಂತ್ರ

ದವಸ ಮತ್ತು ಎಣ್ಣೆಕಾಳು ವಿಷಯದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಅವುಗಳ ಉತ್ಪಾದನೆ, ಸಂಗ್ರಹ ಮತ್ತು ಮಾರುಕಟ್ಟೆಯನ್ನು ಬಲಪಡಿಸಲಾಗುವುದು. ಕಳೆದ ಮಧ್ಯಂತರ ಬಜೆಟ್‌ನಲ್ಲಿ ಈ ಕುರಿತು ಮಾಡಲಾದ ಘೋಷಣೆಗಳ ಜಾರಿಗೆ ಅಗತ್ಯ ಕಾರ್ಯತಂತ್ರವನ್ನು ಜಾರಿಗೊಳಿಸಲಾಗುತ್ತಿದೆ. ಸಾಸುವೆ, ಶೇಂಗಾ, ಎಳ್ಳು, ಸೋಯಾಬೀನ್ ಮತ್ತು ಸೂರ್ಯಕಾಂತಿ ಎಣ್ಣೆಕಾಳು ಉತ್ಪಾದನೆಯಲ್ಲಿ ಸ್ವಾವಲಂಬನೆ ಮೂಲಕ ಆತ್ಮನಿರ್ಭರತೆಯತ್ತ ಹೆಜ್ಜೆ ಇಡಲು ಸರ್ಕಾರ ಬದ್ಧವಾಗಿದೆ ಎಂದು ಸರ್ಕಾರ ಹೇಳಿದೆ.



### ಹೊಸ ತಳಿ ಬಿಡುಗಡೆ

ಕೃಷಿ ಮತ್ತು ತೋಟಗಾರಿಕೆ ವಲಯದ 32 ಬೆಳೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಉತ್ಪಾದಕತೆ ಹೊಂದಿರುವ ಮತ್ತು ಪರಿಸರಕ್ಕೆ ಹೊಂದಿಕೊಳ್ಳುವ 109 ತಳಿಗಳನ್ನು ಕೃಷಿಕರ ಬಳಕೆಗೆ ಬಿಡುಗಡೆ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ.

### ರಾಷ್ಟ್ರೀಯ ಸಹಕಾರಿ ನೀತಿ

ಸಹಕಾರ ವಲಯದಲ್ಲಿ ವ್ಯವಸ್ಥಿತ, ಕ್ರಮಬದ್ಧ ಮತ್ತು ಸರ್ವಾಂಗೀಣ ಅಭಿವೃದ್ಧಿಗಾಗಿ, ರಾಷ್ಟ್ರೀಯ ಸಹಕಾರಿ ನೀತಿ ಜಾರಿಗೊಳಿಸಲಾಗುವುದು ಎಂದು ಸರ್ಕಾರ ಹೇಳಿದೆ. ಈ ನೀತಿಯ ಮೂಲಕ ಗ್ರಾಮೀಣ ಆರ್ಥಿಕತೆಗೆ ಚೇತರಿಕೆ, ಉದ್ಯೋಗ ಸೃಷ್ಟಿಯ ಗುರಿ ಹೊಂದಲಾಗಿದೆ ಎಂದು ಹೇಳಿದೆ.

### ತರಕಾರಿ ಸಾಗಣೆಗೆ ವ್ಯವಸ್ಥೆ

ಹೆಚ್ಚು ತರಕಾರಿ ಬಳಕೆ ಮಾಡುವ ಪ್ರದೇಶಗಳ ಸಮೀಪದಲ್ಲೇ ಬೃಹತ್ ತರಕಾರಿ ಬೆಳೆಯುವ ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಜೊತೆಗೆ ಹೀಗೆ ಬೆಳೆದ ತರಕಾರಿ ಸಂಗ್ರಹ, ಸಾಗಾಟ ಮತ್ತು ಮಾರುಕಟ್ಟೆ ವ್ಯವಸ್ಥೆಗಾಗಿ ರೈತರು, ಉತ್ಪಾದಕರ ಸಂಸ್ಥೆಗಳು, ಸಹಕಾರ ಸಂಘಗಳು ಮತ್ತು ಸ್ಟಾರ್ಟಪ್‌ಗಳ ಪಾಲುದಾರಿಕೆಯನ್ನು ಸರ್ಕಾರ ಪ್ರೋತ್ಸಾಹಿಸಲಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

### ನೈಸರ್ಗಿಕ ಕೃಷಿಗೆ ಪ್ರೋತ್ಸಾಹ

ನೈಸಗಿಕ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮುಂದಿನ 2 ವರ್ಷಗಳ ಅವಧಿಯಲ್ಲಿ ದೇಶವ್ಯಾಪಿ 1 ಕೋಟಿ ರೈತರನ್ನು ನೈಸಗಿಕ ಕೃಷಿಗೆ ಒಳಪಡಿಸಲಾಗುವುದು. ಇಂಥ ರೈತರಿಗೆ ತರಬೇತಿ ಮತ್ತು ಬ್ರ್ಯಾಂಡಿಂಗ್ ಮೂಲಕ ಸರ್ಕಾರ ನೆರವು ನೀಡಲಿದೆ. ಆಸಕ್ತ ಗ್ರಾಮ ಪಂಚಾಯತ್‌ಗಳಲ್ಲಿ ತಾಂತ್ರಿಕ ಸಂಸ್ಥೆಗಳ ಮೂಲಕ ಯೋಜನೆ ಜಾರಿಗೊಳಿಸಲಾಗುವುದು. ಜೊತೆಗೆ ಇಂಥ ನೈಸರ್ಗಿಕ ಕೃಷಿ ಚಟುವಟಿಕೆ ನಡೆಸಲು ಅಗತ್ಯವಾದ ನೈಸರ್ಗಿಕ ರಸಗೊಬ್ಬರ ಮತ್ತು ಔಷಧಗಳನ್ನು ತಯಾರಿಸಲು ದೇಶವ್ಯಾಪಿ 10000 ಕೇಂದ್ರಗಳನ್ನು ಅಗತ್ಯ ಮತ್ತು ಬೇಡಿಕೆಗೆ ಅನುಸಾರವಾಗಿ ತೆರೆಯಲೂ ಸರ್ಕಾರ ನಿರ್ಧರಿಸಿದೆ.

### ಸೀಗಡಿ ಉತ್ಪಾದನೆ ಮತ್ತು ರಫ್ತು

ಸೀಗಡಿ ಉತ್ಪಾದಕತೆ ಹೆಚ್ಚಿಸಲು ಅಗತ್ಯವಾದ ಸೀಗಡಿ ಮೀನು ಮರಿಗಳ ಉತ್ಪಾದನಾ ಕೇಂದ್ರ ಆರಂಭಿಸಲು ಸರ್ಕಾರ ಹಣಕಾಸಿನ ನೆರವು ನೀಡಲಿದೆ. ಇದಲ್ಲದೇ ಸೀಗಡಿ ಮೀನು ಉತ್ಪಾದನೆ ಸಂಸ್ಕರಣೆ ಮತ್ತು ರಫ್ತು ಮಾಡುವ ಕಂಪನಿಗಳಿಗೆ ನಬಾರ್ಡ್ ಮೂಲಕ ನೆರವು ನೀಡಲಾಗುವುದು.

24-07-2024
Dec Hrd Pg 06

# Scheme to assign unique IDs for land parcels

**The 14-digit number accorded to a land parcel is based on its longitude&latitude coordinates and depends on detailed surveys & geo-referenced cadastral maps. It will help deal with the menace of land grabbing**

**ANIRBAN BHAUMIK**
NEW DELHI, DHNS

The Centre is keen to provide financial support to the state governments in expeditiously implementing the 'Bhu Aadhaar' scheme for assigning a unique identification number for all land parcels across the country – a move, which is expected to help mitigate the long pendency of court cases over property disputes.

Presenting the Union Budget for the 2024-25 financial year, Finance Minister Nirmala Sitharaman on Tuesday told the Lok Sabha that the Centre would incentivise the completion of the land reforms by the state governments within the next three years. Assigning the Unique Land Parcel Identification Number (ULPIN) or 'Bhu-Aadhaar' to every parcel of land is one of the actions the Union Government wants the states to speed up, she said.

The 'Bhu Aadhaar', according to the government, is likely to help deal with the growing menace of land-grabbing and other fraudulent activities, including owning 'benami' properties.

"Land-related reforms and actions, both in rural and urban areas, will cover land administration, planning, and management, and urban planning, usage, and building bylaws," Sitharaman said. "These will be incentivized for completion within the next 3 years."

The Unique Land Parcel Identification Number (ULPIN) is part of the Digital India Land Records Modernization Programme (DILRMP) of the government. The 14-digit identification number accorded to a land parcel is based on its longitude and latitude coordinates and depends on detailed surveys and geo-referenced cadastral maps.

The ULPIN is generated



using the Electronic Commerce Code Management Association (ECCMA) standards during the importing of the geo-referenced shape file into BhuNaksha, a cadastral mapping solution of the National Informatics Centre.

It is going to be a single, authoritative source of truth for information on any parcel of land or property.

An official told *DH* that the project being implemented by the Department of Land Resources of the Ministry of Rural Development will create the world's largest database on land ownership.

The GDP loss to the economy is at present estimated at 1.3% due to projects being stalled over litigation involving land disputes, while 66% of all civil suits are related to land or property disputes, and the average pendency of a land acquisition dispute is 20 years.

# SC asks Centre to formulate policy on GM crops

**ASHISH TRIPATHI**
NEW DELHI, DHNS

The Supreme Court on Tuesday asked the Centre to formulate a national policy with regard to GM crops for research, cultivation, trade and commerce in the country, while rendering a split verdict on the validity of the 2022 decision by the Union government granting conditional approval for environmental release of genetically modified (GM) mustard crop.

On October 18, 2022, the Genetic Engineering Appraisal Committee (GEAC) — a statutory body under the Ministry of Environment, Forest and Climate Change (MoEF&CC) and regulator of genetically modified organisms in the country — recommended the environmental release.

Subsequently, another decision was taken on October 25, 2022, approving the environmental release of transgenic mustard hybrid DMH-11.

Dealing with a plea by NGO Gene Campaign and others, a bench of Justices B V Nagarathna and Sanjay Karol gave divergent opinion on the validity of the two decisions and directed the matter be listed before the Chief Justice of India DY Chandrachud for setting up an appropriate bench for adjudication.

## Unanimous

In its 409-page judgment, the bench, however, was unanimous in its finding that judicial review of both the October 18 and October 25 orders of GEAC is permissible.

It directed the Centre to evolve a national policy with regard to GM crops.



**A labourer sprays pesticides on genetically modified cotton crops in Guntur, Andhra Pradesh.** REUTERS FILE

"The said national policy shall be formulated in consultation with all stakeholders, such as experts in the field of agriculture, biotechnology, state governments, representatives of the farmers, etc."

The court said the MoEF & CC shall conduct a national consultation, preferably within the next four months, with the aim of formulating the national policy on GM crops.

It also said the state governments should be involved in evolving the national policy.

The bench further directed the Union government to ensure that all credentials and past records of any expert who participates in the decision-making process should be scrupulously verified and conflict of interest, if any, should be declared and suitably mitigated by ensuring representation to a wide range of interests.

The rules in this regard may be formulated having a statutory force, it said.

Regarding importing of GM food and more particularly GM edible oil, the bench said the Centre shall comply with the requirements of Food Safety and Standards Act (FSSA), 2006, which deals with packaging and labelling of foods.

With regard to the October 18, 2022, and October 25, 2022, decisions, Justice Nagarathna termed those as vitiated, for being in gross violation of the principle of public trust.

24-07-2024
Dec Hrd Pg 07

24-07-2024
Prajavani Pg 10

ನೇಸರ ಕಾಡನಕುಪ್ಪೆ




ಕೃಷಿಯಲ್ಲಿ ಮಣ್ಣಿನ ಬಳಕೆ ಮತ್ತು ಮಹತ್ವ ಬಹಳ ಹಿರಿದು. ಫಲವತ್ತಾದ ಮಣ್ಣು ಸಿಗುವುದು ಕೃಷಿಗೆ ಬೇಕಿರುವ ಪ್ರಾಥಮಿಕ ಅಗತ್ಯ. ಬಳಿಕ ಅಗತ್ಯ ನೀರು, ಗೊಬ್ಬರ, ತಳಿ, ಆರೈಕೆ ಮುಂತಾದವು ಯಶಸ್ವಿ ಕೃಷಿಗೆ ಕಾರಣವಾಗುತ್ತವೆ. ಆದರೆ, ವಿಜ್ಞಾನಿಗಳು ಈ ಪ್ರಾಥಮಿಕ ಅಗತ್ಯಗಳಿಗೆ ಸೆಡ್ಡು ಹೊಡೆಯುವಂತೆ 'ಬುದ್ಧಿವಂತ ಮಣ್ಣ'ನ್ನು ಶೋಧಿಸಿದ್ದಾರೆ. ಈ ಮಣ್ಣು ತನಗೆ ತಾನೇ ಯೋಚಿಸುತ್ತ, ಫಲವತ್ತಾದ ಉತ್ಪನ್ನವನ್ನು ನೀಡುವತ್ತ ಕಾರ್ಯನಿರ್ವಹಿಸುತ್ತದೆ!

ಹೌದು, ಇದು ಬುದ್ಧಿವಂತ ಮಣ್ಣು. ಈ ಮಣ್ಣು ಬುದ್ಧಿವಂತ ಮಾತ್ರವೇ ಅಲ್ಲ, ಹಣದ ಮಿತವ್ಯಯಿಯೂ ಆಗಿದೆ. ಹೇಗೆಂದರೆ, ಸಸಿಗಳ ಪೋಷಣೆಗೆ ಬೇಕಿರುವ ಗಾಳಿಯಲ್ಲಿ ವಿಪುಲವಾಗಿ ಸಿಗುವ ನೀರನ್ನು ಹೀರಿಕೊಂಡು ಅದನ್ನು ಸಸಿಗೆ ತಲುಪಿಸುವ ಕೆಲಸವನ್ನೂ ಈ ಮಣ್ಣು ಮಾಡುತ್ತದೆ. ಜೊತೆಗೆ, ಗೊಬ್ಬರನ್ನು ಇಂತಿಷ್ಟೇ ಪ್ರಮಾಣದಲ್ಲಿ ಸಸಿಗೆ ಒದಗಿಸಿ ಸಸಿಯ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಆಗುವಂತೆ ನೋಡಿಕೊಳ್ಳುವ ಜಾಣ್ಮೆಯೂ ಈ ಮಣ್ಣಿಗೆ ಇದೆ.

ವಿಶ್ವಪ್ರಸಿದ್ಧ 'ಎಸಿಎಸ್ ಮಟೀರಿಯಲ್ಸ್ ಲೆಟರ್ಸ್' ವೈಜ್ಞಾನಿಕ ನಿಯತಕಾಲಿಕೆಯಲ್ಲಿ ಈ ಸಂಶೋಧನೆ ಪ್ರಕಟವಾಗಿದೆ. ಅಮೆರಿಕದ ಟೆಕ್ಸಾಸ್ 'ಮಟೀರಿಯಲ್ಸ್ ಇನ್‌ಸ್ಟಿಟ್ಯೂಟ್ ಮತ್ತು ಕಾಕ್ರೆಸ್ ಸ್ಕೂಲ್ ಆಫ್ ಎಂಜಿನಿಯರಿಂಗ್'ನ ವಾಕರ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿಗಳಾದ ಪ್ರೊ. ಯೂ, ಜುಂಗ್‌ಜೂನ್ ಪಾರ್ಕ್, ವೀಕ್ಸಿನ್ ಗಾನ್ ಹಾಗೂ ಶೂಕ್ಸಿನ್ ಲೀ ಜಂಟಿಯಾಗಿ ಈ ಬುದ್ಧಿವಂತ ಮಣ್ಣನ್ನು ಆವಿಷ್ಕರಿಸಿದ್ದಾರೆ.

## ಏನಿದು ಸಂಶೋಧನೆ?

ಪ್ರಪಂಚದಲ್ಲಿ ಕೃಷಿಗೆ ಶೇ 70ರಷ್ಟು ಶುದ್ಧನೀರನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೇ, ಶೇ 95ರಷ್ಟು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿ ಉತ್ಪನ್ನಗಳ ಬೇಡಿಕೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದಕ್ಕೆ ಹೆಚ್ಚುತ್ತಿರುವ ಜನಸಂಖ್ಯೆ ಮುಖ್ಯ ಕಾರಣ. ಇದರ ಪರಿಣಾಮವಾಗಿ ಶುದ್ಧನೀರಿನ ಬೇಡಿಕೆ ಹೆಚ್ಚುತ್ತಿದ್ದು, ಪೂರೈಕೆ ಕಷ್ಟವಾಗುತ್ತಿದೆ. ಇದಕ್ಕೆ ಪರಿಹಾರವೆಂದರೆ ಪರ್ಯಾಯ ತಂತ್ರಜ್ಞಾನವೊಂದನ್ನು ಕಂಡುಕೊಳ್ಳುವುದು. ಸ್ವಾಭಾವಿಕವಾಗಿಯೇ ಮಣ್ಣಿಗೆ ಗಾಳಿಯಲ್ಲಿನ ನೀರನ್ನು ಹೀರಿಕೊಳ್ಳುವ ಗುಣ ಇರುತ್ತದೆ. ಈ ಗುಣವನ್ನೇ ಸುಧಾರಿಸಿ ಕೃಷಿಗೆ ಬೇಕಿರುವ ಶೇ 90ರಷ್ಟು ನೀರನ್ನು ಗಾಳಿಯಿಂದಲೇ ಹೀರಿಕೊಳ್ಳುವಂತೆ ಈ ಸಂಶೋಧನೆ ನಡೆದಿದೆ.

ಕೆಲವು ಸಸ್ಯತಳಿಗಳು ಹೆಚ್ಚು ನೀರನ್ನು ಬಯಸುತ್ತವೆ. ಉದಾಹರಣೆಗೆ ಭತ್ತ, ಗೋಧಿ, ಕಬ್ಬು ಮುಂತಾದವು. ಇವುಗಳಿಗೆ ಗದ್ದೆಗಳನ್ನು ರಚಿಸಿ ವಿಪುಲವಾಗಿ ನೀರನ್ನು ಒದಗಿಸಬೇಕಾಗುತ್ತದೆ. ರಾಗಿ ಮಾದರಿಯ ಏಕದಳ ಧಾನ್ಯಗಳು, ಬೇಳೆ ಮಾದರಿಯ ದ್ವಿದಳ ಧಾನ್ಯಗಳಿಗೆ ಕಡಿಮೆ ನೀರು ಇದ್ದರೂ ಸಾಕಾದೀತು. ಆದರೆ, ದೊಡ್ಡ ಜನಸಂಖ್ಯೆಗೆ ಎದುರಾಗುವ ಹಸಿವಿನ ಸಮಸ್ಯೆಯನ್ನು ನೀಗಿಸಬೇಕಾದರೆ ಹೆಚ್ಚು ನೀರು ಬಯಸುವ ತಳಿಗಳಿಗೂ ಅಗತ್ಯ ನೀರನ್ನು ಕೊಡಲೇಬೇಕು. ಇದನ್ನು ಮುಖ್ಯವಾಗಿ ಮನಸಿನಲ್ಲಿ ಇರಿಸಿಕೊಂಡು ಈ ಸಂಶೋಧನೆಯನ್ನು ಮಾಡಲಾಗಿದೆ ಎಂದು ವಿಜ್ಞಾನಿ ಪ್ರೊ. ಯೂ ಹೇಳಿದ್ದಾರೆ.

ಇದಕ್ಕಾಗಿ 'ಹೈಡ್ರೋಜೆಲ್' ಎಂಬ ಕೃತಕ ಉತ್ಪನ್ನವೊಂದನ್ನು ಶೋಧಿಸಿದ್ದು, ಅದನ್ನು ಮಣ್ಣಿಗೆ ಬರೆಸಲಾಗಿದೆ. ಹೆಸರೇ ಹೇಳುವಂತೆ ಈ ವಸ್ತುವಿನಲ್ಲಿ ನೀರಿನ ಅಂಶ ಇರುತ್ತದೆ. ಅಂದರೆ, ವಾತಾವರಣದಲ್ಲಿನ ನೀರಿನ ಆವಿಯನ್ನು ಇದು ಹೀರಿಕೊಂಡು ತನ್ನಲ್ಲಿ ಶೇಖರಿಸಿಕೊಳ್ಳುತ್ತದೆ. ಜೊತೆಗೆ, ತಾನು ಇರುವ ಮಣ್ಣಿನಲ್ಲಿ ನಿಧಾನವಾಗಿ ತನ್ನಲ್ಲಿ ಶೇಖರವಾಗಿರುವ ನೀರನ್ನು ನಿಧಾನವಾಗಿ ಹೊರ ಸೂಸುತ್ತದೆ. ಇದರಿಂದ ಮಣ್ಣು ಒದ್ದೆಯಾಗಿರುತ್ತದೆ ಎಂದು ತಮ್ಮ ಸಂಶೋಧನೆಯ ಕಾರ್ಯವೈಖರಿಯನ್ನು ಪ್ರೊ. ಯೂ ವಿವರಿಸಿದ್ದಾರೆ.

ಇದಿಷ್ಟೇ ಈ ಮಣ್ಣಿನ ಗುಣವಲ್ಲ. ಈ 'ಹೈಡ್ರೋಜೆಲ್'ಗಳಲ್ಲಿ 'ನ್ಯಾನೋ ರೋಬೋಟ್'ಗಳನ್ನು ಇರಿಸಲಾಗಿರುತ್ತದೆ. ಇವು ಕೇವಲ ನೀರು ಮಾತ್ರವೇ ಅಲ್ಲದೇ, ಮಣ್ಣಿನಲ್ಲಿ ಬೆರೆಸುವ ರಾಸಾಯನಿಕಗಳನ್ನು ಎಷ್ಟು ಪ್ರಮಾಣದಲ್ಲಿ, ಎಷ್ಟು ಅವಧಿಯಲ್ಲಿ ಸಸಿಗಳಿಗೆ ತಲುಪಿಸಬೇಕು ಎಂಬುದನ್ನು ನಿರ್ಧರಿಸುತ್ತವೆ. ಜೊತೆಗೆ, ಸಸಿಯ ಬೆಳವಣಿಗೆಯ ಮೇಲೆ ನಿಗಾ ವಹಿಸಿ ಅಗತ್ಯವುಳ್ಳ ಪೋಷಕಾಂಶಗಳನ್ನು ತಲುಪಿಸುತ್ತವೆ. ಸಸಿಯ ಬೇರುಗಳೊಂದಿಗೆ ನೇರವಾಗಿ ಸಂಪರ್ಕ ಹೊಂದುವ ಈ ನ್ಯಾನೋ ರೋಬೋಟ್‌ಗಳು ಸಸಿಯ ಸಂಪೂರ್ಣ ಆರೋಗ್ಯವನ್ನು ಸದಾ ಕಾಲ ಪರೀಕ್ಷಿಸುತ್ತಿರುತ್ತವೆ.

ಹಾಗಾಗಿ, ರೈತರು ನೀಡುವ ರಾಸಾಯನಿಕ ಅಥವಾ ಸಾವಯವ ಕೀಟನಾಶಕಗಳನ್ನೂ ಇವು ಜಾಣ್ಮೆಯಿಂದ ಬಳಸುವ ಕೆಲಸವನ್ನು ಮಾಡುತ್ತವೆ. ರೈತನ ಕಣ್ತಪ್ಪು ಅಥವಾ ಕೈತಪ್ಪಿನಿಂದ ಅಗತ್ಯಕ್ಕಿಂತ ಹೆಚ್ಚು ಕೀಟನಾಶಕ ಅಥವಾ ಗೊಬ್ಬರ ಮಣ್ಣಿಗೆ ಸೇರಿದರೂ ಸಸಿಗೆ ಬೇಕಾಗುವಷ್ಟು ಮಾತ್ರ ತಲುಪಿಸುವ ಕೆಲಸವನ್ನು ಈ ಬುದ್ಧಿವಂತ ಮಣ್ಣು ತನ್ನಲ್ಲಿನ ನ್ಯಾನೋ ರೋಬೋಟ್‌ಗಳ ಸಹಾಯದಿಂದ ಮಾಡುತ್ತದೆ.

ಜೊತೆಗೆ, 'ಹೈಡ್ರೋಜೆಲ್'ಗಳನ್ನು ಮಣ್ಣಿಗೆ ಬೆರೆಸುವ ಪ್ರಮಾಣವನ್ನು ಸಸಿಯ ತಳಿಯ ಆಧಾರದ ಮೇಲೆ ಬೆರೆಸಬಹುದಾಗಿದೆ. ಹೆಚ್ಚು ನೀರು ಬಯಸುವ ತಳಿಗಳಿಗೆ ಹೆಚ್ಚು 'ಹೈಡ್ರೋಜೆಲ್' ಬಳಸಬಹುದು. ಈ 'ಹೈಡ್ರೋಜೆಲ್' ಸಂಪೂರ್ಣ ಸಾವಯನ ಎನ್ನುವುದು ಒಳ್ಳೆಯ ವಿಚಾರವಾಗಿದೆ. ಈ 'ಹೈಡ್ರೋಜೆಲ್' ಮಣ್ಣಿನ ಜೊತೆಗೆ ಬೆರೆಯುವುದಿಲ್ಲ. ಹಾಗಾಗಿ, ಮಣ್ಣಿಗೆ ಬೆರೆಸುವ ಈ ವಸ್ತುವು ಅಡ್ಡಪರಿಣಾಮ ಬೀರುತ್ತದೆ ಎನ್ನುವ ಭಯವೂ ಇಲ್ಲ. ಅಲ್ಲದೇ, ಈ 'ಹೈಡ್ರೋಜೆಲ್' ಸಂಪೂರ್ಣವಾಗಿ ಕೊಳೆಯುವ ಗುಣವನ್ನು ಹೊಂದಿದೆ. ಅಂದರೆ, ತನ್ನ ಸಾಮರ್ಥ್ಯ ಕ್ಷೀಣಿಸಿದ ಮೇಲೆ ಅದು ಮಣ್ಣಿನಲ್ಲೇ ಕೊಳೆತುಹೋಗಿ, ಗೊಬ್ಬರವಾಗುತ್ತದೆ. ಆದ್ದರಿಂದ ಇದರ ಕೆಲಸ ಮುಗಿದಮೇಲೂ ಗೊಬ್ಬರವಾಗಿ ರೈತರಿಗೆ ನೆರವಾಗುತ್ತದೆ.

ರೈತರ ಹಲವು ಸಮಸ್ಯೆಗಳನ್ನು ಈ ಬುದ್ಧಿವಂತ ಮಣ್ಣು ನೀಗಿಸಲಿದೆ ಎಂದು ವಿಜ್ಞಾನಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬೇಕಾದ ನೀರನ್ನು ಉಚಿತವಾಗಿ ಪಡೆಯುವುದು, ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳುವುದು, ಫಸಲಿನ ಪ್ರಮಾಣವನ್ನು ಹೆಚ್ಚಿಸುವುದು ಪ್ರಮುಖ ಅನುಕೂಲಗಳಾಗಿವೆ.

AGRICULTURE

# Seeds of research to sow climate-resilient varieties

## One crore farmers to be trained in natural farming; digital crop survey to be taken up in 400 districts

AJITH ATHRADY
NEW DELHI, DHNS

With the climate change impacting the agriculture sector severely, the Centre on Tuesday announced that it will undertake a comprehensive review of the agriculture research setup to bring the focus on raising productivity and developing climate resilient varieties.

Finance Minister Nirmala Sitharaman, presenting the 2024 Union Budget, said that new 109 high-yielding and climate-resilient varieties of 32 field and horticulture crops will be released for cultivation by farmers.



**SEEDS OF CHANGE**
- Vegetable clusters to be developed
- Target to achieve self-sufficiency in pulses and oilseeds
- 10,000 bio-input resource centres will be established.

The minister announced that Rs 1.52 lakh crore has been set aside for agriculture and allied sectors in FY-2025.

The minister said in the next two years, one crore farmers across the country will be initiated into natural farming supported by certification and branding. Implementation will be through scientific institutions and willing gram panchayats. As many as 10,000 need-based bio-input resource centres will be established, she said.

For achieving self-sufficiency in pulses and oilseeds, the Centre will strengthen their production, storage and marketing.

Vegetable production clusters will be developed closer to major consumption centres. The government will promote Farmer-Producer Organisations, cooperatives and start-ups for vegetable supply chains including for collection, storage, and marketing, Nirmala said.

The government facilitates the implementation of the Digital Public Infrastructure (DPI) in agriculture for coverage of farmers and their lands in three years. During this year, a digital crop survey for kharif using the DPI will be taken up in 400 districts. The details of six crore farmers and their lands will be brought into the farmer and land registries. Further, the issuance of Jan Samarth based Kisan Credit Cards will be enabled in five states.

24-07-2024
Dec Hrd
Pg 07

# ದೇಶಾದ್ಯಂತ 100 ಆಹಾರ ಪರೀಕ್ಷಾ ಕೇಂದ್ರಗಳ ಸ್ಥಾಪನೆ

ಆಹಾರೋದ್ಯಮಗಳ ಉತ್ತೇಜನ ಮತ್ತು ಆಹಾರ ಉತ್ಪನ್ನಗಳ ಸುರಕ್ಷತೆಯನ್ನು ಖಾತರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ ದೇಶಾದ್ಯಂತ 100 ಮಾನ್ಯತೆ ಪಡೆದ ಆಹಾರ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಣೆ ಮಾಡಲಾಗಿದೆ. ಇತ್ತೀಚೆಗಿನ ದಿನಗಳಲ್ಲೇ ಭಾರತದ ಕೆಲವು ಸಂಸ್ಥೆಗಳ ಮಸಾಲೆ ಪದಾರ್ಥಗಳನ್ನು ಸಿಂಗಾಪುರ್, ಹಾಂಕಾಂಗ್ ಸೇರಿದಂತೆ ಕೆಲ ರಾಷ್ಟ್ರಗಳಲ್ಲಿ ನಿಷೇಧಿಸಲಾಗಿತ್ತು. ಈ ಬೆನ್ನಲ್ಲೇ ಕೇಂದ್ರಸರ್ಕಾರ ಈ ಕ್ಷೇತ್ರಕ್ಕೆ ಒತ್ತು ನೀಡಿರುವುದು ಗಮನಾರ್ಹ. ಸುರಕ್ಷಿತ ಆಹಾರ ಪದಾರ್ಥಗಳು ಗ್ರಾಹಕರಿಗೆ ತಲುಪುತ್ತಿವೆ ಎಂದು ಖಾತರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ ದೇಶಾದ್ಯಂತ ಪ್ರಯೋಗಲಾಯಗಳ ಜಾಲವನ್ನು ಬಲಗೊಳಿಸುವುದು ಈ ಪ್ರಸ್ತಾಪದ ಪ್ರಮುಖ ಉದ್ದೇಶವಾಗಿದೆ.

# ಜೇನು ಕೃಷಿಗೆ ಸಹಾಯ

ಜೇನು ಕೃಷಿಗೆ ಉತ್ತೇಜನ ನೀಡುವ ಸಲುವಾಗಿ 5 ಕೋಟಿ ರೂ. ನಿಗದಿ ಮಾಡಲಾಗಿದೆ. ಜೇನು ಕೃಷಿಯಲ್ಲಿ ತೊಡಗಿಕೊಳ್ಳುವವರಿಗೆ



ಪೆಟ್ಟಿಗೆಯನ್ನು ನೀಡಲಾಗುತ್ತಿದೆ. ಅಡಕೆ, ತೆಂಗಿನ ತೋಟಗಳಲ್ಲೂ ಜೇನು ಕೃಷಿಗೆ ಉತ್ತೇಜನ ನೀಡುವ ಬಗ್ಗೆ ಆದ್ಯತೆ ನೀಡಲಾಗುತ್ತಿದೆ. ಬಡಕಟ್ಟು ಜನರಿಗೆ ಕಡಿಮೆ ವೆಚ್ಚದಲ್ಲಿ ಜೇನು ಪೆಟ್ಟಿಗೆ ನೀಡುವ ಪ್ರಯತ್ನ ಮಾಡಲಾಗುವುದು ಎಂದು ಬಿಜೆಪಿಯ ಶಾಂತಾರಾಮ್ ಬುಡ್ನ ಸಿದ್ದಿ ಕೇಳಿದ ಪ್ರಶ್ನೆಗೆ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಹೇಳಿದರು.

# Fertiliser subsidy is queering the pitch for agri sector's growth

Ashok Gulati & Ritika Juneja

The finance minister has announced an allocation of Rs 1.52 lakh crore for agriculture and allied sectors in FY25, constituting 3.1% of the total expenditure of Rs 48.2 lakh crore. This marks only a slight increase from Rs 1.4 lakh crore in the revised estimate (RE, FY24).

It hardly adjusts for inflation. Additionally, Nirmala Sitharaman stated that over the next two years, one crore farmers will be introduced to natural farming practices.

However, this raises concern, given the budget of Rs 1.64 lakh crore earmarked for fertiliser subsidy in FY25. This subsidy allocation surpasses the total budgetary allocation for agriculture and allied sectors in FY25. Such a discrepancy prompts critical reflection on fertiliser subsidy and raises questions between promoting sustainable farming practices and subsidising granular fertilisers, especially urea, which can have adverse effects on soil health.

It is noteworthy that granular urea, as currently applied in fields, is not fully utilised by crops. Estimates of nutrient use efficiency (NUE) indicate only around 35% of nitrogenous urea is absorbed by crops. Since temperature is high, most of the urea will volatilise as ammonia ($NH_3$), nitrogen gas ($N_2$), and nitrous oxide ($N_2O$) gases. Ammonia, upon oxidation, transforms into nitrate ($NO_3$), which is 273 times the carbon equivalence causing global warming.



CATCH IT

Besides, a portion of applied fertiliser nitrogen is leached into groundwater, rendering it non-potable due to high nitrate content.

When fertiliser subsidy was introduced in the 1970s, the ratio of grain yield to fertiliser application was 10:1. Over time, this ratio has dwindled to 2:1. One might question why our policymakers are reluctant to explore alternatives. Fertiliser subsidy should be transferred from ministry of chemicals and fertilisers to ministry of agriculture to ensure direct disbursement to farmers. This step, combined with deregulating prices of specific fertilisers, has the potential to encourage equitable pricing and usage, potentially leading to savings in subsidies.

**EXPERTSPEAK**

The FM could also consider digitising the distribution process by providing electronic vouchers or coupons that can be used to purchase fertilisers from registered agri-input dealers. This will eliminate leakages and diversions.

According to the last two input-output tables of the country, around 20-30% of nitrogenous fertilisers meant for agriculture are being diverted elsewhere – unrelated industries like plywood and glass manufacturing or to neighbouring countries.

The Economic Survey 2024 underscored the pressing need for reforms in fertiliser administration. It presented two key policy recommendations. One WAS to leverage Agri Stack, a robust digital platform well-established in major states, to enhance targeting of fertiliser subsidies. Agri Stack enables precise identification of eligible farmers and regulation of fertiliser quantities based on land ownership and primary crops cultivated.

The other was adoption of E RUPI, on the lines of e-coupons, to digitally transfer flexible input subsidies directly to farmers' registered bank accounts. This subsidy can be utilised by farmers using authorised PoS machines to purchase fertilisers and other essential items like seeds and pesticides from authorised outlets.

However, for these reforms to succeed, it is crucial to integrate farmers' credentials such as Aadhar, mobile number, and bank accounts with all agricultural land owned by them.

*(Gulati & Juneja are distinguished professor and fellow, ICRIER, respectively. Views are personal)*

24-07-2024
Times of Ind
Pg 09

# ಬೆಳೆಗಳಿಗೆ ಬೆಂಬಲ ಬೆಲೆಗೆ ಕೃಷಿ ಬೆಲೆ ನೀತಿ ರೂಪಿಸಬೇಕಿತ್ತು

## ನೈಸರ್ಗಿಕ ವ್ಯವಸಾಯಕ್ಕೆ ಒತ್ತು ಸ್ವಾಗತಾರ್ಹ

ಕೃಷಿ ಕ್ಷೇತ್ರಗಳಿಗೆ 1.52 ಲಕ್ಷ ಕೋಟಿ ಅನುದಾನ ನೀಡಲಾಗಿದೆ. ಇದರಲ್ಲಿ ಮುಖ್ಯವಾಗಿ ಸುಸ್ಥಿರ ಕೃಷಿ, ಡಿಜಿಟಲ್ ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಆ ಮೂಲಕ ಉತ್ಪಾದನೆಗೆ ಒತ್ತು ನೀಡಲಾಗಿದೆ. ಮುಂದಿನ 2 ವರ್ಷಗಳಲ್ಲಿ 10 ಕೋಟಿ ರೈತರನ್ನು ನೈಸರ್ಗಿಕ ಕೃಷಿಗೆ 'ಶಿಫ್ಟ್' ಮಾಡುವ ಗುರಿಯನ್ನು ಹೊಂದಿದೆ. ಇದು ಸ್ವಾಗತಾರ್ಹ.






**ಪ್ರೊ.ಆರ್.ಎಸ್. ದೇಶಪಾಂಡೆ,**
ಮಾಜಿ ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾಣೆ ಅಧ್ಯಯನ ಸಂಸ್ಥೆ (ಐಸೆಕ್).

ಆದರೆ, ಇದರ ಆಚೆಗೆ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನ ಈ ಬಜೆಟ್‌ನಲ್ಲಿ ನಡೆದಿದೆಯೇ ಎಂದು ಕೇಳಿದರೆ, ಉತ್ತರ- 'ಇಲ್ಲ' ಎಂದೇ ಹೇಳಬೇಕಾಗುತ್ತದೆ. 'ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ' ಎನ್ನುವುದೊಂದೇ ರೈತರ ಅಳಲು ಆಗಿದೆ. ಬೆಂಬಲ ಬೆಲೆ ಇದೆಯಲ್ಲ ಎಂದು ಕೇಳಬಹುದು. ಅದರಿಂದ ಎಲ್ಲ ರಾಜ್ಯಗಳ ರೈತರಿಗೂ ಅನುಕೂಲ ಆಗುವುದಿಲ್ಲ. ಹಾಗಾಗಿ, ಕೃಷಿ ಬೆಲೆ ನೀತಿ ರೂಪಿಸಬೇಕಿತ್ತು.

ಇದರ ಮುಂದುವರಿದ ಭಾಗ 'ಮಾರುಕಟ್ಟೆ ಮಾರ್ಜಿನ್'. ಪ್ರಸ್ತುತ ವ್ಯವಸ್ಥೆಯಲ್ಲಿ 6 ತಿಂಗಳು ಕಷ್ಟಪಟ್ಟು ಬೆಳೆದ ರೈತನಿಗೆ 250 ರೂ. ಸಿಕ್ಕರೆ, ಮಧ್ಯವರ್ತಿಗೆ 500 ರೂ. ಸಿಗುತ್ತಿದೆ. ವ್ಯಾಪಾರಿಗೆ 3 ಪಟ್ಟು ಅಂದರೆ 750 ರೂ. ಸಿಗುತ್ತಿದೆ. ಈ ಸ್ಥಿತಿ ಬದಲಾಗಬೇಕಿದೆ. ಮಾರುಕಟ್ಟೆ ಸಂಖ್ಯೆ ಹೆಚ್ಚಿಸಬೇಕಿತ್ತು. ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ ಕಡೆಗೆ ಹೆಚ್ಚು ಒತ್ತುಕೊಡುವ ಕೆಲಸ ಆಗಬೇಕಿತ್ತು. ಇದನ್ನು ಎದುರುನೋಡುತ್ತಿರುವ ರೈತರ ಪ್ರಮಾಣ ಶೇ. 85ರಷ್ಟಿದೆ. ಆದರೆ, ಈ ಅಂಶಗಳ ಕಡೆಗೆ ಗಮನ ನೀಡಿಲ್ಲ. ತಂತ್ರಜ್ಞಾನ ಆಧಾರಿತ ಕೃಷಿ, ಸಂಶೋಧನೆ ಮತ್ತು ಅಭಿವೃದ್ಧಿ ಬೇಕಾಗಿಯೇ ಇಲ್ಲ ಅಂತ ನಾನು ಹೇಳುತ್ತಿಲ್ಲ. ನಮ್ಮ ಆದ್ಯತೆ ಸಣ್ಣ ಮತ್ತು ಅತಿಸಣ್ಣ ರೈತರು ಆಗಿರಬೇಕಿತ್ತು. ಅತಿಹೆಚ್ಚು ಇಳುವರಿ ಕೊಡುವ 109 ತಳಿಗಳನ್ನು ಘೋಷಿಸಲಾಗಿದೆ. ಆದರೆ, ಎಷ್ಟು ಸಣ್ಣ-ಅತಿಸಣ್ಣ ರೈತರು ಆ ತಳಿಗಳ ಪ್ರಯೋಗಕ್ಕೆ ಮುಂದಾಗುತ್ತಾರೆ? ಕಳೆದ ಹಲವು ದಶಕಗಳಲ್ಲಿ 25 ಸಾವಿರಕ್ಕೂ ಅಧಿಕ ತಳಿಗಳು ಬಂದಿವೆ. ಅದರಲ್ಲಿ ಎಷ್ಟು ತಳಿಗಳು ನಮ್ಮ ರೈತರ ಜಮೀನುಗಳಿಗೆ ಬಂದಿವೆ? ಈ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಬಹುಸಂಖ್ಯಾತ ರೈತರ ದೃಷ್ಟಿಯ ಕೊರತೆ ಕಾಣುತ್ತಿದೆ.

ಇನ್ನು ಗ್ರಾಮೀಣಾಭಿವೃದ್ಧಿ ಮೂಲಸೌಕರ್ಯ ಅಭಿವೃದ್ಧಿಗೆ 2.66 ಲಕ್ಷ ಕೋಟಿ ನೀಡಿರುವುದು ಸ್ವಾಗತಾರ್ಹ. ಈ ಹಣ ಸಾಮಾನ್ಯವಾಗಿ ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗೆ ಬರುತ್ತದೆ. ನಂತರ ಅಲ್ಲಿಂದ ಪಂಚಾಯ್ತಿ ಮಟ್ಟಕ್ಕೆ ಹೋಗುತ್ತದೆ. ಈ ಬಾರಿ ಬಜೆಟ್‌ನಲ್ಲಿ ನೀಡಿದ ಅನುದಾನ ಹಾಗೆ ಆಗಬಾರದು. ನೇರವಾಗಿ ಪಂಚಾಯ್ತಿಗಳಿಗೆ ಹೋಗುವಂತಾದರೆ, ಉದ್ದೇಶ ಸಾರ್ಥಕವಾಗುತ್ತದೆ.